ಮುಂಚ್ಚಿರುವ ಅಥವಾ ರೋಗಗ್ರಸ್ತ ಕೈಗಾರಿಕೆಗಳ ವಿವರ

೬೯೬. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).–ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮುಂಚ್ಚಲ್ಪಟ್ಟಿರುವ ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಘಟಕಗಳ ಸಂಖ್ಯೆ ಎಷ್ಟು ಹಾಗೂ ರೋಗಗ್ರಸ್ತವಾಗಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು ?

ಆ) ಮುಂಚ್ಚಲ್ಪಟ್ಟಿರುವ ಕೈಗಾರಿಕೆ ಘಟಕಗಳನ್ನು ತೆರೆಯಲು, ಹಾಗೂ ರೋಗಗ್ರಸ್ತ ಕೈಗಾರಿಕೆಗಳನ್ನು ರೋಗಗ್ರಸ್ತ ಪರಿಸ್ಥಿತಿಯಿಂದ ವಿಮುಕ್ತಿಗೊಳಿಸಲು ಸರ್ಕಾರವು ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ದೊರಕಿರುವ ಮಾಹಿತಿ ಆಧಾರದ ಮೇಲೆ.

೧	ಮಧ್ಯಮ ಮತ್ತು ಭಾರಿ ಪ್ರಮಾಣದ ಕೈಗಾರಿಕೆಗಳು ಮುಚ್ಚಿರುವುದು	೩೨
೨	ಸಣ್ಣ ಪ್ರಮಾಣದ ಕೈಗಾರಿಕೆಗಳು ಮುಂಚ್ಚಿರುವುದು	೭೬೫
	ಒಟ್ಟು	೭೯೭
೩	ರೋಗಗ್ರಸ್ತವಾಗಿರುವ ಮಧ್ಯಮ ಮತ್ತು ಭಾರಿ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ (ಮುಚ್ಚಿರುವ ೩೨ ಕೈಗಾರಿಕೆಗಳು ಸೇರಿದಂತೆ)	೫೩
೪	ದಿನಾಂಕ ೩೧–೧೨–೧೯೫೫ರವರೆಗೆ ರೋಗಗ್ರಸ್ತವಾಗಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ (ಆರ್‌ಬಿಐ ವರದಿ ಪ್ರಕಾರ)	೫೭೦೫
	ಒಟ್ಟು	೫೭೫೮

ಆ) ಸರ್ಕಾರವು ಮುಚ್ಚಲಾಗಿರುವ ಕೈಗಾರಿಕೆಗಳ ಮಾಲೀಕರು ಅಥವಾ ಆಡಳಿತ ವರ್ಗದವರನ್ನು ಮೆತೈಕತೆಗಾಗಿ ಆಹ್ವಾನಿಸಿ ಸರ್ಕಾರದಿಂದ ಭರಿಸಬಹುದಾದ ರಿಯಾಯ್ತಿಗಳನ್ನು ನೀಡಿ ಸದರಿ ಕೈಗಾರಿಕೆಗಳನ್ನು ತೆರೆಸಲು ವ್ಯವಸ್ಥೆ ಮಾಡಲಾಗುತ್ತಿದೆ, ಹಣಕಾಸು ಸಂಸ್ಥೆಗಳು ಬ್ಯಾಂಕುಗಳು ಸಹ ಇಂತಹ ರೋಗಗ್ರಸ್ತ ಘಟಕಗಳ ಹಾಗೂ ಮುಚ್ಚಿರುವ ಘಟಕಗಳನ್ನು ತೆರೆಸಲು ಪ್ರಯತ್ನಿಸುತ್ತಿವೆ. ಎಲ್ಲೆಲ್ಲಿ ಮುಂಚ್ಚಿರುವ ಹಾಗೂ ರೋಗಗ್ರಸ್ತ ಘಟಕಗಳ ಆಡಳಿತ ವರ್ಗ ಇಂತಹ ಪುನಶ್ಚೇತನಕ್ಕೆ ಮನಸ್ಸು ಮಾಡದಿದ್ದಲ್ಲಿ ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕುಗಳು ಇಂತಹ ಘಟಕಗಳನ್ನು ಆಸಕ್ತಿ ಹೊಂದಿರುವ ಬೇರೆ ಆಡಳಿತ ವರ್ಗಕ್ಕೆ ವಹಿಸುವ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಕ್ಷೇತ್ರ ಸೊಗಲದಲ್ಲಿ ಚಿಗರೆ ಬನ ಸ್ಥಾಪಿಸುವ ಬಗ್ಗೆ

೧೦೦೯. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).–ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆ ಸೌದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಸೊಗಲ ಪ್ರವಾಸಿಗರ ಹಾಗೂ ಯಾತ್ರಾ ಸ್ಥಳವಾಗಿರುವುದು ನಿಜವಲ್ಲವೆ ?

ಆ) ಸಾರ್ವಜನಿಕ ಐತಿಹಾಸಿಕ ಹಾಗೂ ಕಾಡು ಸಂರಕ್ಷಣೆ ಮಾಡುವ ಮತ್ತು ಸೃಷ್ಟಿ ಸೌಂದರ್ಯ ಕಾಪಾಡಿಕೊಂಡು ಹೋಗುವಂತಾಗಲು ಇಲ್ಲಿ ಚಿಗರೆ ಬನ ಸ್ಥಾಪಿಸುವ ಅವಶ್ಯವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಸರ್ಕಾರದವರು ಯಾವ ಕ್ರಮ ಕೈಗೊಂಡಿರುವುದು ?